ಯಾರೋ ಕದ್ದುಬಿಟ್ಟಾಗ ನನಗಾದ ನೋವು ಅತೀತವಾದದ್ದು. ನಾನು ನಿನಗೆ ಹೀಗೆ ಯಾವ ಉಡುಗೊರೆಗಳನ್ನು ಕೊಡಲಿಲ್ಲ. ನನಗೇನೂ ಅದರ ಬಗ್ಗೆ ಬೇಸರವೂ ಇಲ್ಲ. ಯಾರಿಗೆ ಯಾವುದು ಸಾಧ್ಯವಿದೆಯೋ ಅದನ್ನು ಅಷ್ಟೇ ನಿರ್ವ್ಯಾಜ ಪ್ರೀತಿಯಿಂದ ಕೊಡುವುದನ್ನು ಮನುಷ್ಯರು ಕಲಿಯಬೇಕಿರುವುದು. ಉಡುಗೊರೆಗಳು ಮನುಷ್ಯರಿಗೆ ಸಂತೋಷ ಕೊಡಬಲ್ಲವಾದರೂ, ಅವು ಒಂದು ಬಗೆಯ ಪೈಪೋಟಿಯನ್ನು, ಹೆಮ್ಮೆಯನ್ನು, ಅಳುಕನ್ನೂ ತರಬಲ್ಲವು. ಇಷ್ಟಾದರೂ ನಿನಗಿಷ್ಟವಾದ ನಮ್ಮ ಹಿತ್ತಲಿನ ಬಾಳೆಹಣ್ಣನ್ನೋ, ತರಕಾರಿಯನ್ನೋ ಆಗಾಗ ಸಿಗುವಂತೆ ನೋಡಿಕೊಳ್ಳುತ್ತಿದ್ದೆ. ನೀನು ಅಷ್ಟಕ್ಕೇ 'ಅಸಾಮಾನ್ಯವಾದುದು' ಸಿಕ್ಕವನಂತೆ ಸಂಭ್ರಮಿಸುತ್ತಿದ್ದೆ. ನೀನಾಗ ಚಾಕೊಲೇಟಿಗೆ ಆಸೆಪಡುವ ಪುಟ್ಟ ಮಗುವಿನಂತೆ ಕಾಣುತ್ತಿದ್ದೆ. ಹೀಗೆ ಬರೆಯುವಾಗಲೂ ಕೂಡ 'ರಾಗಿ ಬೆಳೆಯುವುದೇ ಶ್ರೇಷ್ಠ ಎಂದು ನಂಬುವವನು ಈ ಕಾಲದಲ್ಲಿ ಮೂರ್ಖನೂ ಆಗಬಲ್ಲ' ಎಂಬ ಲಂಕೇಶರ ಬರಹವೂ ತಿವಿಯುತ್ತಿದೆ. ಇರಲಿ. ಇಂತಹ ತಿವಿತಗಳು ಮನುಷ್ಯನಿಗೆ ಇರುವುದೇ ಸೊಗಸು. ಇದನ್ನೆಲ್ಲಾ ನಿನ್ನೊಂದಿಗಲ್ಲದೇ ಇನ್ನಾರ ಜೊತೆ ಹಂಚಿಕೊಳ್ಳುವುದೋ...

ಸದಾ ನಗುವ ಗುಂಡುಮುಖ, ನೀಟಾದ ಡ್ರೆಸ್, ಎಲ್ಲದರಲ್ಲೂ ಶಿಸ್ತು, ಸಮಯಪಾಲನೆ, ಯಾರೊಂದಿಗೂ ಶತ್ರುತ್ವ ಕಟ್ಟಿಕೊಳ್ಳದ ಜಾಣ್ಮೆ, ಯೋಜಿತ ಬದುಕು, ಅದನ್ನು ಸಾಕಾರಗೊಳಿಸಲು ಅವಿರತ ದುಡಿಮೆ, ದುಡಿಮೆ... ಯಾವ ತಾಯಿಯಾದರೂ ಇಂಥ ಮಗ ಬೇಕು ಎಂದು ಹಂಬಲಿಸುವ, ಯಾವ ಹೆಣ್ಣಾದರೂ ಇಂಥ ಗಂಡ ಸಿಗಲಿ ಎಂದು ಆಸೆಪಡುವ, ಯಾವ ಮಕ್ಕಳಾದರೂ ಇಂಥ ಅಪ್ಪನಿರಲಿ ಎನಿಸುವ ಹಾಗಿದ್ದವನು ನೀನು!

ನೀನು ನಮ್ಮ ನವನಾಗರಿಕತೆಯ ಅತ್ಯುತ್ತಮ ಉದಾಹರಣೆ. **Customer relationship, Target** ಅನ್ನುವುದು ನವನಾಗರಿಕತೆಯ ಅತ್ಯುನ್ನತ ವಿಧಾನವಾಗಿ ಮಾರ್ಪಟ್ಟಿರುವಾಗ, ನಿನ್ನ ವ್ಯಕ್ತಿತ್ವವನ್ನು ಅದಕ್ಕೆ ಅನುಗುಣವಾಗಿ ರೂಪಿಸಿಕೊಂಡಿದ್ದೆ. ಈಗೇನಿದ್ದರೂ ದುಡಿ, ಕೂಡಿಡು. ಸಂತೋಷ, ನೆಮ್ಮದಿ ಕೊನೆಗಾಲಕ್ಕೆ ಕಾದಿರಿಸು ಎಂಬುದೇ ನವನಾಗರಿಕತೆ ಬಿತ್ತಿರುವ ಇನ್ನೊಂದು ಮುಖ್ಯಪಾಠ. ಆ ಪಾಠವನ್ನು ಚಾಚೂತಪ್ಪದೇ ಪಾಲಿಸುತ್ತಿದ್ದವನು ನೀನು. ಹಿಂದಿನ ತಲೆಮಾರು ಕೂಡ ದುಡಿ, ಕೂಡಿಡು ಎಂದು ಬದುಕಿತ್ತಾದರೂ ಆಯಾ ಸಮಯದ ಸಂತೋಷ, ಜವಾಬ್ದಾರಿ ಅಲ್ಲಲ್ಲೇ ಸಾಧ್ಯವಾದಷ್ಟೂ ನೆರವೇರಿಸಿ ಹೇಗೋ ತೆವಳಿಕೊಂಡು ಮುಂಬರಿಯುತ್ತಿತ್ತು. ನಿನ್ನ ವೇಗದ ಕೆಲಸವೇ ನಿನ್ನ ಆಯಾ ಕಾಲದ ಸಂತೋಷ, ಜವಾಬ್ದಾರಿಗಳನ್ನು ಕಸಿದುಕೊಂಡು ನಿನ್ನಲ್ಲಿ ಒದ್ದಾಟ ಹುಟ್ಟಿಸುತ್ತಿತ್ತು. ಅದನ್ನು ದಾಟಲು ನೀನು ವೃದ್ಧಾಶ್ರಮ, ಅನಾಥಾಲಯಗಳಿಗೆ ನೆರವಾಗುತ್ತಿದ್ದೆ; ಒಳ್ಳೆಯ ಕೆಲಸಗಳ ಕಡೆಗೆ ನೀನು ತುಡಿಯುತ್ತಿದ್ದೆ. ಬಹುಪಾಲು ಅನಾಥಾಶ್ರಮ, ವೃದ್ಧಾಶ್ರಮಗಳು ನಡೆಯುವುದೇ ನಿನ್ನಂತಹವರ ಪಾಪಪ್ರಜ್ಞೆಯಿಂದ ಎಂಬುದೂ ಅಷ್ಟೇ ಸತ್ಯ. ಬಹುಶಃ ಇದಕ್ಕೆ ಕಾರಣವಾದದ್ದು ನಿಮ್ಮ ಅಮ್ಮನ ಸಾವು. ಆಕೆಗೆ ಹೃದಯಾಘಾತ ಆದಾಗ ನೀನಾವುದೋ ದೂರದ ಊರಿನಲ್ಲಿದ್ದೆ. ತಕ್ಷಣ ಆಕೆಯನ್ನು ಒಳ್ಳೆಯ ಆಸ್ಪತ್ರೆಗೆ ಸೇರಿಸಲಾಗಲಿಲ್ಲ. ವಿದ್ಯಾವಂತನಾದ ನಿನ್ನಪ್ಪ ಕೃಪಣನಂತೆ ವರ್ತಿಸುವ ಬದಲು ಕೊಂಚ ಗಂಡನಾಗಿ ನಡೆದುಕೊಂಡಿದ್ದರೂ ಆಕೆ ಇನ್ನಷ್ಟು ಕಾಲ ಬದುಕುವ ಅವಕಾಶಗಳು ಇದ್ದವು. ನಿನ್ನ ಸ್ಥಾನಮಾನ, ಕಾರು, ಸೈಟುಗಳ ಬಗ್ಗೆ ಕಂಡಕಂಡವರ ಬಳಿ ಕೊರೆಯುತ್ತಿದ್ದ ನಿಮ್ಮಪ್ಪನ ಈ ಚದುರಂಗದಾಟ ಇಂದಿಗೂ ನನಗರ್ಥವೇ ಆಗಿಲ್ಲ.

ಆದರೆ ಅಮ್ಮನ ಸಾವು ನಿನ್ನಲ್ಲಿ ಹುಟ್ಟುಹಾಕಿದ ತಪ್ಪಿತಸ್ಥ ಭಾವನೆ ಸ್ಪಷ್ಟವಾಗಿ ಆಲೋಚಿಸುವ ಅವಕಾಶವನ್ನು ಕಿತ್ತುಕೊಂಡಿತು. ಇದು ನನಗೆ ನಿಚ್ಚಳವಾಗಿ ಕಂಡಿದ್ದು ನಿಮ್ಮಮ್ಮನ ತಿಥಿಯಲ್ಲಿ. ಪೂಜಾರಿಯೊಬ್ಬ 'ನಿಮ್ಮ ಮಾತೃಶ್ರೀಯವರ ಕಾರ್ಯಗಳನ್ನು ಬಹಳ ಶ್ರದ್ಧಾಭಕ್ತಿಯಿಂದ ಮಾಡಿದ್ದೀರಿ. ಇದರಿಂದ ನಿಮ್ಮ ತಾಯಿಯ ಆತ್ಮಕ್ಕೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ನೀವು ಒಂದು ವರ್ಷದ ತನಕ ಹೊರಗಡೆ ಏನನ್ನೂ ಸೇವಿಸಬಾರದು. ನಿಮ್ಮ ಪತ್ನಿಯೊಂದಿಗೆ ಕೂಡಬಾರದು. ಆಗ ನಿಮ್ಮ ತಾಯಿ ಸ್ವರ್ಗ ಸೇರುವರು...' ಇತ್ಯಾದಿ ಹೇಳುತ್ತಿದ್ದ. ನೀನು ಗೋವಿನಂತೆ ಗೋಣು ಹಾಕುತ್ತಿದ್ದೆ. ಏಕೆಂದರೆ, ದಿನಬೆಳಗಾದರೆ ಊರಿಂದೂರಿಗೆ ಓಡಾಡುವ ನಿನ್ನ ಕೆಲಸದಲ್ಲಿ ಈ ಬೊಗಳೆ ಮಾತುಗಳು ಎಷ್ಟು ಅರ್ಥಹೀನ ಎಂದು ಯಾರಾದರೂ ಊಹಿಸಬಹುದಾಗಿತ್ತು. ಇದೆಲ್ಲ ನೀನು ಪಾಲಿಸಲು ಸಾಧ್ಯವಿತ್ತೆ? ಇಂತಹ ಓಬೀರಾಯನ ಕಾಲದ ಅಣಿಮುತ್ತುಗಳೇ ಮನುಷ್ಯನಲ್ಲಿ ಪಾಪಪ್ರಜ್ಞೆ ಹುಟ್ಟಿಸಬಲ್ಲವೇ ಹೊರತೂ ಹೆಚ್ಚೇನನೂ ಅವನೊಳಗೆ ಕದಲಿಸಲಾರವು. ಇರಲಿ.

ಇನ್ನು ನಿನ್ನ ಒಳ್ಳೆಯತನ, ಭಾವುಕತನದ ಬಗ್ಗೆ ಅನೇಕ ಹಳೆಯ ಮುದುಕಿಯರ ಮೆಚ್ಚುಗೆ. ತುಂಬಾ ಜನರ ರೆಫರೆನ್ಸ್ ಆಗಿ ಉಳಿದುಬಿಟ್ಟಿರುವ ನಿನ್ನ ಮದುವೆ ಘಟನೆ ನೆನಪಾಗುತ್ತದೆ. ಮದುವೆ ಮುಗಿಸಿ, ಹುಡುಗನ ಮನೆಗೆ ಹೊರಟಾಗ ಕಣ್ಣೀರು ಹಾಕುತ್ತಿದ್ದ ನಿನ್ನ ಹೆಂಡತಿ. 'ನೀನು ಅತ್ತರೆ ನಾನೂ ಅತ್ತೇ ಬಿಡುವೆ. ಅಳಬೇಡ ಕಣೇ' ಎಂದು ನೀನು ಆಕೆಯ ಕಣ್ಣೀರು ತಡೆದಿದ್ದು ಇನ್ನೂ ಈಗೆಲ್ಲೋ ನಡೆದಂತಿದೆ. ಇದಾಗಿ ಎಷ್ಟೋ ವರ್ಷಗಳೇ ಕಳೆದಿವೆ.

ಕೆಲವು ವಿಷಯಗಳಲ್ಲಿ ನಿನ್ನ ಬಗ್ಗೆ ಯೋಚಿಸಿದಾಗೆಲ್ಲ ನಾನು ನಿನ್ನಂತೆ ಕಾಲದ ಲಗಾಮು ಹಿಡಿಯುತ್ತಾ ನಡೆಯಲಾರದ ಹೆಳವನಿರಬಹುದು ಎನಿಸುತ್ತದೆ. ಉದಾಹರಣೆಗೆ 'ಹನಿಹನಿಗೂಡಿದರೆ ಹಳ್ಳ' ಎಂಬ ಹಳೆಯ ನಾಣ್ಣುಡಿಯನ್ನು ನೀನು 'ಹಳ್ಳ ಹಳ್ಳ ಕೂಡಿದರೆ

